ಹೆಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 137.

ಮೃತಪಟ್ಟ ಚೌಡೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರಲ್ಲಿರುವ ಬೂರಲೈ ಸ್ಕೂಲ್ ಮಾಸ್ಟರು ನಂಜುಂಡಪ್ಪನು, ಮೃತಪಟ್ಟ ಸದರೀ ಚೌಡೇಗವುಡರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ಡಿಸ್ಟ್ರಿಕ್ಟು ತಿಬಟೂರು ತಾಲ್ಲೂಕು ಮಾಯಿಸಂಬ್ರದ ಸಮ್ಮತು ಕಾಡನೂರು ಮಾವಿನಕೆರೆ ಸ್ಥಳದ ನಂಜುಂಡಪ್ಪನು ಡಿಟೋ ಊರು ವಾಸಸ್ಥರಾಗಿ ಮೃತಪಟ್ಟ ಲೇಟ್ ಅಂಜೇ ಇನ್ಸ್‌ಪೆಕ್ಟರು ಚೌಡೇಗವುಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜುಂಡಪ್ಪನ ಅರ್ಜಿಯನ್ನು 1896ನೇ ಇಸವಿ ನವಂಬರು ತಿಂಗಳ ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚೌಡೆಗವುಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ನವಂಬರ್ ತಿಂಗಳ 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 161.

ಮೃತಪಟ್ಟ ಪಟೇಲ್ ತಿಮ್ಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ದೇವಂಡಹಳ್ಳಿಯಲ್ಲಿರುವ ರಾಮಸ್ವಾಮಿ ಮೈನರ್ ಗಾರ್ಡಿಯರ್ ಮೃತಪಟ್ಟ ಸದರೀ ತಿಮ್ಮಯ್ಯನ ಅಂಣನ ಮಗ ದೊಡ್ಡ ಮುನಿಯಪ್ಪನು ಮೃತಪಟ್ಟ ಸದರಿ ತಿಮ್ಮಯ್ಯನೆಂಬವನಿಗೆ, ರಾಮಸ್ವಾಮಿಯು ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ದೇವಂಡಹಳ್ಳಿ ಸ್ಥಳದ ದೊಡ್ಡ ಮುನಿಯಪ್ಪ ದೇವಂಡಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪಟೇಲ್ ತಿಮ್ಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ದೊಡ್ಡ ಮುನಿಯಪ್ಪನ ಅರ್ಜಿಯನ್ನು ಸ್ ೧೮೯೭ನೇ ಇಸವಿ ಜನವರಿ ತಿಂಗಳ ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ತಿಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ನವಂಬರು ತಿಂಗಳ 10ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 144.

ಅರ್ಜೀದಾರ ತಿರಪತ್ತೂರು ತಾಲ್ಲೂಕು ವಾನಂಬಡಿಗೆ ಕೇರಿದ ಕಂಕರಪುರದಲ್ಲಿರುವ ಜಂಗಲರಾಯಪ್ಪನ ಮಗ ವೆಂಕಟಸುಬ್ಬರಾವ್ ಮೈನರಾದ ಮಾಲೂರು ತಾಲ್ಲೂಕು ತ್ಯಾಕಲ್ಲು ಸಮ್ಮತು ನಕ್ಕನಹಳ್ಳಿಯಲ್ಲಿ ಮೃತಪಟ್ಟ ನರಸಪ್ಪನ ಹೆಂಣುಮಕ್ಕಳಾದ 1ನೇ ಭಾಗೀರಥಮ್ಮ, 2ನೇ ಶೀತಮ್ಮ ಯಿವರುಗಳ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ಭಾಗೀರಥಮ್ಮ, 2ನೇ ಶೀತಮ್ಮ ಯಿವರಿಗೆ ಅರ್ಜೀದಾರ ವೆಂಕಟಸುಬ್ಬರಾವು 1ನೇ ಯವಳಿಗೆ ಗಂಡ ಮತ್ತು 2ನೇ ಯವಳಿಗೆ ಸೋದರಮಾವಾ ಆಗಬೇಕೆಂಬ ಹಕ್ಕಿನ ಮೇಲೆ ತಿರಪತ್ತೂರು ತಾಲ್ಲೂಕು ಕಂಕರಪುರದಲ್ಲಿರುವ ವೆಂಕಟಸುಬ್ಬರಾವು ಸದರೀ ಮೈನರುಗಳ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1896ನೇ ಇಸವಿ ನವಂಬರು ತಾರೀಖು 26ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟೀಸ್ ಕೂಡಲಾಗಿದೆ.

1896ನೇ ಇಸವಿ ನವಂಬರ್ ತಿಂಗಳ 2ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ಯಸ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ನೋ ಟಿ ಸ್ :

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಆಫೀಸುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜವಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಳು ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತನ್ನು ಇದರಡಿ ವಿವರಿಸಿದೆ.